ಕುಂದಾಪುರ ಗಿರಿಜನ ಆಶ್ರಮ ಶಾಲೆಯಲ್ಲಿ ಅಡಿಗೆ ಕಾರ್ಯನಿರ್ವಹಿಸುತ್ತಿದ್ದು ಶ್ರೀಮತಿ ಸುಶೀಲರವರನ್ನು ತಮ್ಮ ಕರ್ತವ್ಯದಲ್ಲಿ ಲೋಪ, ಬೇಜವಾಬ್ದಾರಿ ವರ್ತನೆ ಮತ್ತು ಅಶಿಸ್ತಿನಿಂದ ವರ್ತಿಸಿರುವುದಕ್ಕೆ ಹಾಗೂ ಕು: ವಿಶಾಲಳನ್ನು ವೈದ್ಯಾಧಿಕಾರಿಗಳು ತಪಾಸಣೆ ನಡೆಸಿ, ಇದು ಅತ್ಯಾಚಾರವೆಂದು ಖಚಿತಪಡಿಸಿಕೊಂಡ ನಂತರ ದಿನಾಂಕ: 16-8-97ರಂದು ವಿಚಾರಣೆಯನ್ನು ಕಾಯ್ದಿರಿಸಿ, ಶ್ರೀಮತಿ ಸುಶೀಲರವರನ್ನು ಸೇವೆಯಿಂದ ಅಮಾನತ್ತುಗೊಳಿಸಿರುವುದಾಗಿ ಸಹ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ವರದಿ ಮಾಡಿರುತ್ತಾರೆ.

ಈ ರೀತಿ ವರದಿ ಬಂದಿದೆ. ಆದರೂ ಸಹ ಇದರ ಗಂಭೀರತೆಯನ್ನು ನೋಡಿ ಇಲಾಖೆಯಿಂದ ಒಬ್ಬರು ದಕ್ಷ ಐ.ಎ.ಎಸ್.ಅಧಿಕಾರಿಯವರನ್ನು ನಿಯೋಜಿಸಿ ವಿಚಾರಣೆ ಮಾಡಿಸಿ ಮಾಹಿತಿಯನ್ನು ಪಡೆಯುತ್ತೇನೆ. ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರವಾಗಿರುವ ನೇರವಾದ ಆಪಾದನೆ ಇರುವುದರಿಂದ ಆ ಕ್ರಮ ತೆಗೆದುಕೊಳ್ಳುತ್ತೇವೆಂದು ಭರವಸೆ ನೀಡುತ್ತೇನೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ

(1) ಕಾವೇರಿ ಡಿಸ್‌ಪ್ಯೂಟ್ ವಿಚಾರದಲ್ಲಿ ಅಬ್ಜಕ್ಷನ್ ಹಾಕಲು ಸುಪ್ರೀಮ್ ಕೋರ್ಟ್‌ನಿಂದ ಎರಡುವಾರ ಸಮಯ

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):ಮಾನ್ಯ ಉಪಾಧ್ಯಕ್ಷರೆ, ಬಹಳ ಮುಖ್ಯವಾದ ವಿಚಾರವೊಂದಿದೆ. ಮಾನ್ಯ ನಾಣಯ್ಯನವರು ಇಲ್ಲಿದ್ದಾರೆ. ಅವರ ಗಮನಕ್ಕೆ ಮತ್ತು ಮುಖ್ಯಮಂತ್ರಿಯವರ ಮತ್ತು ನೀರಾವರಿ ಸಚಿವರ ಗಮನಕ್ಕೆ ಈ ವಿಚಾರ ಬಂದಿದೆಯೆಂದು ತಿಳಿದುಕೊಂಡಿದ್ದೇನೆ. ಅದೇನೆಂದರೆ

"The Supreme Court has fixed a two-week deadline for the Kerala and Karnataka Governments to file thier objections on the centre's draft scheme regarding implementation of the Cauvery Water Dispute Tribunal's six-year old interim order.

The draft notification issued by the Centre envisages constituting the Cauvery River Authority to monitor Karnataka's implementation of the interim award. The State has already expressed its opposition to the notification.

The Tribunal had directed the Karnataka Government to release 205 tmcft.Water annually to Tamil Nadu. A five-judge constitution Bench on Wednesday asked Attorney-General Ashok H.Desai to inform it on September 30, about compliance of its directive. Mr.Desai said while Tamil Nadu filed its objections, Karnataka submitted only a 'general response."

(ಶ್ರೀ ಬಿ.ಬಿ.ಶಿವಪ್ಪನವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

4.20 ಪಿಎಂ

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈ ರೀತಿಯಾಗಿ ಎರಡು ವಾರದೊಳಗಾಗಿ ಅಬ್‌ಜಕ್ಷನ್ ಕಳುಹಿಸಬೇಕಾಗಿತ್ತು, ಆದರೆ ಕಳುಹಿಸಲಿಲ್ಲ. ಅವರು ಪುನಃ ಎರಡು ವಾರಗಳ ಸಮಯವನ್ನು ಕೊಟ್ಟಿದ್ದಾರೆ. ಮತ್ತು ನಮಗೆ ನಿರ್ದೇಶನವನ್ನು ನೀಡಿದ್ದಾರೆ. ಅದಕ್ಕೆ ಇವತ್ತು ನಾನು ಸರ್ಕಾರದ ವತಿಯಿಂದ ಒಂದು ಹೇಳಿಕೆಯನ್ನು ಅಪೇಕ್ಷಿಸುತ್ತೇನೆ. ಏಕೆಂದರೆ ಇದು ಮಹತ್ತರವಾದ ವಿಷಯ, ಅಲ್ಲದೆ ಈಗಾಗಲೇ ನಾವು ಸಾಕಷ್ಟು ಕಳೆದು ಕೊಂಡಿದ್ದೇವೆ. ಪುನಃ ನಾವು ಡಿಫಾಲ್ಟರ್ ಆಗಿ, ಅಥವಾ ಏನನ್ನೂ ಹೇಳದೆ, ಅಥವಾ ಏನನ್ನೂ ಕೇಳದೆ, ಅಥವಾ ಸರ್ಕಾರದ ನಿಲುವು ಎನು ಎನ್ನುವುದಾದರೂ ಈ ಸದನಕ್ಕೆ ಗೊತ್ತಾಗಬೇಕು. ಮೊನ್ನೆ ಇಂಟರ್‌ಸ್ಟೇಟ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಕೇರಳದಲ್ಲಿ ಕರ್ನಾಟಕದ ಮುಖ್ಯಮಂತ್ರಿಗಳ ಪ್ರತಿನಿಧಿಗಳು ಇದ್ದರು. ಆಮೇಲೆ ತಮಿಳುನಾಡು ಕೇರಳ ಇವರೆಲ್ಲರೂ ಸೇರಿದ್ದರು, ಅಲ್ಲಿಯೂ ಸಹ ಸರಿಯಾಗಿ ಸ್ಪಷ್ಟವಾಗಿ ಏನೂ ಹೇಳಿಲ್ಲ. ಗೃಹಮಂತ್ರಿಗಳು ಏನು ಹೇಳಿದ್ದಾರೆ ಎಂದರೆ,

"The discussion faltered on the issue of criteria or guidelines to be applied on deciding each State's share of the Cauvery Waters. Such guidelines don't exist at present. There is no agreed principle on this."

"Ultimately, the Council decided that the Union Minister of Water Resources be asked to call a conference of the Southern Ministers dealing with water resources to work out a criterion for sharing of inter-river Waters." ಅಂದರೆ ಈ ಒಂದು ನೀರಿನ ಬಗ್ಗೆ ಒಂದು ಗೈಡ್‌ಲೈನ್ಸ್ ತಯಾರು ಮಾಡುವವರೆಗೂ, ಪಾಲಿಸಿ ತಯಾರು ಮಾಡುವವರೆಗೂ, ಈ ಸಮಸ್ಯೆಯನ್ನು ಬಗೆಹರಿಸಲಿಕ್ಕಾಗುವುದಿಲ್ಲ

ಅನ್ನತಕ್ಕ ಮಾತು ಹೋಗಲಿ, ಗೃಹಮಂತ್ರಿಗಳು ಕೇರಳದಲ್ಲಿ ಒಂದುಕಡೆ ಕೇಂದ್ರಸರ್ಕಾರದವರು ಕರೆಸಿ ಮಾತನಾಡುತ್ತೇವೆ ಎಂಬ ವ್ಯೂ ಎಕ್ಸ್‌ಪ್ರೆಸ್ ಮಾಡುತ್ತಾರೆ. ಅಬ್ಜಕ್ಷನ್ಸ್‌ಗಳನ್ನು ಎರಡು ವಾರದೊಳಗೆ ಸಬ್‌ಮಿಟ್ ಮಾಡಬೇಕು ಇಲ್ಲ ಎಂದರೆ ನಾವು ಮ್ಯಾಟರ್ ಕ್ಲೋಸ್ ಎಂದು ಹೇಳಿ ಟ್ರೀಟ್ ಮಾಡುತ್ತೇವೆ ಎನ್ನತಕ್ಕ ಮಾತು ಹೇಳುತ್ತಿದ್ದಾರೆ. ಅದಕ್ಕೆ ದಯವಿಟ್ಟು ಸರ್ಕಾರದ ನಿಲುವು ಏನು ಯಾವರೀತಿ ಇದನ್ನು ಸುಪ್ರೀಂ ಕೋರ್ಟ್‌ಮುಂದೆ ಪ್ರೊಸೀಡ್ ಮಾಡುತ್ತೀರಿ, ಯಾವರೀತಿಯಾಗಿ ಇವತ್ತು ಇಂಟರ್ ಸ್ಟೇಟ ಕೌನ್ಸಿಲ್ ಮುಂದೆ ನೀವು ಫೀಲ್ಡ್ ಮಾಡುತ್ತೀರಿ ಎನ್ನತಕ್ಕದ್ದರ ಬಗ್ಗೆ ಒಂದು ಸ್ಪಷ್ಟವಾದ ನಿಲುವುವನ್ನು ಈ ಸದನದ ಮುಂದೆ ತಿಳಿಸಿದರೆ ಇಡೀರಾಜ್ಯದ ಜನತೆಗೆ ಗೊತ್ತಾಗುತ್ತದೆ. ಕಾವೇರಿ ಬಗ್ಗೆ ಹೊಸದಾಗಿ ತೆಗೆದುಕೊಂಡಿರತಕ್ಕ ನಿಲುವು ಏನು ಮತ್ತು ಎಷ್ಟರಮಟ್ಟಿಗೆ ತಾವು ಇಂದ್ರಜಿತ್ ಗುಪ್ತಾ ಹೇಳಿಕೆಯನ್ನು ಸಮರ್ಥನೆ ಮಾಡುತ್ತೀರಿ, ಅಥವಾ ಅಶೋಕ ದೇಸಾಯಿಯವರಿಗೆ ಏನು ಈವತ್ತು ಡೈರಕ್ಷನ್ ಕೊಟ್ಟಿದ್ದಾರೆ ಅದನ್ನು ಇವತ್ತು ಫಾಲೋ ಮಾಡುತ್ತಿದ್ದೀರಿ ಎನ್ನತಕ್ಕಂಥದ್ದರ ಸ್ಪಷ್ಟವಾಗಿ ಹೇಳಿಕೆ ಕೊಡಬೇಕು.

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಬಹುಶಃ ಪತ್ರಿಕೆಯಲ್ಲಿ ನೋಡಿದ ತಕ್ಷಣ ಸರ್ಕಾರ ಒಂದು ಹೇಳಿಕೆಯನ್ನು ಕೊಡುತ್ತದೆ ಎಂದು ನಾವು ನೀರಿಕ್ಷೆ ಮಾಡಿದ್ದೆವು. ತಮಗೆ ಗೊತ್ತಿರುವ ಹಾಗೆ ಕೇಂದ್ರ ಸರ್ಕಾರ ರೂಪಿಸಿರುವಂತಹ ಕರಡು ಯೋಜನೆ ಜಾರಿಗೆ ತಂದರೆ ಟ್ರಿಬ್ಯುನಲ್ ಮಧ್ಯಂತರ ಆಜ್ಞೆಯ ಮೇಲೆ ಕೊಶ್ಚನ್ ಮಾಡಿರತಕ್ಕ ಕಾಲದಲ್ಲಿ ದೊಡ್ಡ ಅನಾಹುತವಾಗುತ್ತದೆ ಎಂದು ಹೇಳಿ, ಎಲ್ಲಾ ಸದಸ್ಯರು ಸೇರಿ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಿಯೋಗ ಹೋಗಿ ಪ್ರಧಾನಿಯವರನ್ನು ಭೇಟಿ ಮಾಡಿ ಬಂದಿದ್ದರು. ಅವತ್ತು ನಾವು ಆಗ್ರಹ ಮಾಡಿದಾಗ ಸಾಲಿಸಿಟರ್ ಜನರಲ್ ಮೂಖಾಂತರ ಇಮ್ಮೀಡಿಯೇಟ್ ಆಗಿ ಟ್ರೀಬ್ಯುನಲ್ ಇಂಟರಿಯಮ್ ಆರ್ಡರ್ ಬಗ್ಗೆ ಕರ್ನಾಟಕ ಸರ್ಕಾರ ಕೊಶ್ಚನ್ ಮಾಡಿದ್ದರೂ ಅದರ ತೀರ್ಪು ಇನ್ನು ಹೊರಬಂದಿಲ್ಲ. ಅಲ್ಲಿಯವರೆಗೆ ಯಾವುದೇ ಕಾರಣಕ್ಕೆ ಈ ಕೇಂದ್ರಸರ್ಕಾರ ರೂಪಿಸಿರುವ ಕರಡು ಯೋಜನೆ, ಪ್ರಾಧಿಕಾರ ರಚನೆ ಮಾಡುವುದನ್ನು ಮುಂದುವರೆಸುವುದಿಲ್ಲ ಎಂದು ಕೋರ್ಟಿನಲ್ಲಿ ತಾವೊಂದು ಹೇಳಿಕೆಯನ್ನು ಮಾಡಿಸಿ, ಸಾಲಿಸಿಟರ್ ಜನರಲ್ ಮುಖಾಂತರ ವಿನಂತಿ ಮಾಡಿ ಬಂದಿದ್ದೆವು ಪ್ರಧಾನಿಯವರೂ ಇದಕ್ಕೆ ಒಪ್ಪಿಕೊಂಡಿದ್ದರು. ಎರಡೂ ರಾಜ್ಯದ ಮುಖ್ಯಮಂತ್ರಿಗಳನ್ನು ಕರೆಸಿ ಮಾತನಾಡುತ್ತೇನೆ. ಎಂದು ಸಹ ಹೇಳಿದ್ದರು. ಇದಾದ ಮೇಲೆ ಸರ್ಕಾರದ ಕಡೆಯಿಂದ ಈ ದಿಕ್ಕಿನಲ್ಲಿ ಯಾವರೀತಿ ಕಾರ್ಯಪ್ರವೃತ್ತರಾಗಿದ್ದೀರಿ ಅನ್ನುವುದಕ್ಕೆ ಯಾವುದೇ ರೀತಿಯ ಮಾಹಿತಿ ಇಲ್ಲ. ಆದರೆ ಇವತ್ತು ಇದ್ದಕ್ಕಿದ್ದ ಹಾಗೆ ಎರಡು ವಾರದೊಳಗೆ ಅಕ್ಷೇಪಣೆ ಸಲ್ಲಿಸದಿದ್ದರೆ, ಸಲ್ಲಿಸಲಿಕ್ಕೆ ಸರ್ಕಾರ ವಿಫಲವಾದರೆ ಕೇಂದ್ರಸರ್ಕಾರದವರು ರೂಪಿಸಿರತಕ್ಕ ಕರಡು ಯೋಜನೆಗೆ ಯಾವುದೇ ಆಕ್ಷೇಪಣೆ ಇಲ್ಲ ಎಂದು ನಾವು ಭಾವಿಸುತ್ತೇವೆ ಎಂದು ಹೇಳಿ ನ್ಯಾಯಧೀಶರು ತೀರ್ಪು ಕೊಟ್ಟು, ಕೇವಲ ಎರಡು ವಾರಗಳ ಸಮಯವನ್ನು ಕೊಟ್ಟಿದ್ದಾರೆ. ಆಕಸ್ಮಾತ್ ಎರಡು ವಾರಗಳ

ಸಮಯವನ್ನು ನೀಡದೇ ಇದ್ದಿದ್ದರೆ ಬಹುಶಃ ಸರ್ಕಾರದ ನಿರ್ಲಕ್ಷ್ಯದಿಂದ ಅಥವಾ ಸಮಯಕ್ಕೆ ಸರಿಯಾಗಿ ನಮ್ಮ ಅಬ್ಜಕ್ಷನ್ ಫೈಲ್ ಮಾಡದೆ ಇದ್ದುದರಿಂದ ಮತ್ತೊಂದು ಗಂಡಾಂತರ ನಮಗೆ ಒದಗಿ ಬರುತ್ತಿತ್ತು ಆದರೆ ಏನು ಎರಡು ವಾರಗಳ ಸಮಯ ಸಿಕ್ಕಿದೆ, ನಮಗೆ ತಮ್ಮಿಂದ ವಾಸ್ತವಿಕವಾಗಿ ಬೇಕಾಗಿರುವುದು ಏನು ಅಂದರೆ, ಕೋರ್ಟಿನಲ್ಲಿ ಅಬ್ಜೆಕ್ಷನ್ ಏಕೆ ಫೈಲ್ ಮಾಡಲಿಲ್ಲ. ಎರಡನೆಯದಾಗಿ ಪ್ರಧಾನಿಯವರು ಒಪ್ಪಿಕೊಂಡ ಹಾಗೆ ಸಾಲಿಸಿಟರ್ ಜನರಲ್ ಮುಖಾಂತರ ಈ ಒಂದು ಕರಡು ಯೋಜನೆ ಜಾರಿಗೆ ತರುವುದು ಬೇಡ ಎಂದು ಹೇಳಿ ಇವತ್ತು ಏನು ಅವರು ಸುಪ್ರೀಮ್ ಕೋರ್ಟಿಗೆ ಮನವಿ ಮಾಡಬೇಕು ಎಂದು ವಿನಂತಿ ಮಾಡಿದ್ದೇವಲ್ಲಾ, ಆ ದಿಕ್ಕಿನಲ್ಲಿ ಏಕೆ ಕಾರ್ಯಪ್ರವೃತ್ತರಾಗಲಿಲ್ಲ? ಮತ್ತು ಎರಡು ರಾಜ್ಯಗಳ ಮುಖ್ಯಮಂತ್ರಿಗಳು ಪ್ರಧಾನಿಗಳ ಸಮ್ಮುಖದಲ್ಲಿ ಮಾತುಕತೆ ನಡೆದಿದೆಯೇ ಈಗ ವಾಸ್ತವವಾದ ಸ್ಥಿತಿ ಏನು? ಯಾವುದೇ ವಿಷಯ ಬಂದಾಗ ನಾವು ಇಲ್ಲಿ ಉತ್ತರನ ಪೌರುಷದಂತೆ ಮಾತನಾಡುತ್ತೇವೆ. ಮತ್ತೊಂದು ಘಟನೆಗಳು ಆದಮೇಲೆ ಅದರ ಮೇಲೆ ಗಮನ ಕೊಡುವಂತದ್ದು, ನಾಲ್ಕು ಐದು ವರ್ಷಗಳಿಂದ ನಮ್ಮ ಗಮನಕ್ಕೆ ಬಂದಿರುವುದು. ಸುಪ್ರೀಮ್ ಕೋರ್ಟಿಗೆ ಏಕೆ ಅಬ್ಜಕ್ಷನ್ ಫೈಲ್ ಮಾಡಲಿಲ್ಲ ಎನ್ನುವುದರ ಬಗ್ಗೆ ಒಂದು ವಿವರಣೆ ಒಂದು ಮಾಹಿತಿಯನ್ನು ಕೊಟ್ಟರೆ, ನಮಗೆ ಅದರ ಮೇಲೆ ಕ್ಲಾರಿಫಿಕೇಷನ್ ಕೇಳಲಿಕ್ಕೆ, ಮಾತನಾಡುವುದಕ್ಕೆ ಅನುಕೂಲವಾಗುತ್ತದೆ. ಇದರ ಬಗ್ಗೆ ಅಧ್ಯಕ್ಷರ ಕೊಠಡಿಗೆ ಬಂದು ನಾನು ವಿನಂತಿ ಮಾಡಿಕೊಂಡಿದ್ದೆ.

ಉಪಾಧ್ಯಕ್ಷರು: ನೀವು ಎತ್ತಿರತಕ್ಕ ವಿಷಯವನ್ನು ವಾಟಾಳ್‌ನಾಗರಾಜ್‌ರವರು ಪ್ರಸ್ತಾಪ ಮಾಡಿದರು. ಆಮೇಲೆ ನಾಗೇಗೌಡರು ಹೇಳಿಕೆ ಕೊಟ್ಟು, ನಾಳೆ ಮೂರು ಗಂಟೆಗೆ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭಾಧ್ಯಕ್ಷರ ಕೊಠಡಿಯಲ್ಲಿ ಒಂದು ಮೀಟಿಂಗ್ ಫಿಕ್ಸ್ ಮಾಡುತ್ತೇವೆ ಎಲ್ಲರೂ ಕೂಡಿ ಮಾತನಾಡೋಣ. ಅನ್ನುವ ಮಾತನ್ನು ಹೇಳಿದ್ದಾರೆ. ಎಲ್ಲಾ ವಿರೋಧಪಕ್ಷಗಳು ನಾಯಕರು ಒಬೊಬ್ಬರೇ ಬಂದರೆ ಮಾತನಾಡುವುದಕ್ಕೆ ಆಗುವುದಿಲ್ಲ. ಸಮಯ ಸಾಕಾಗುವುದಿಲ್ಲ,

ಬಿ.ಎಸ್. ಯಡಿಯೂರಪ್ಪ: ಅಲ್ಲಿ ಮಾತನಾಡುವುದೇ ಬೇರೆ, ಇಲ್ಲಿ ಸದನದ ಮೂಲಕ ರಾಜ್ಯದ ಜನತೆಗೆ ತಿಳಿಸುವುದೇ ಬೇರೆ, ಈ ಸದನದ ಮೂಲಕ ವಾಸ್ತವ ಸ್ಥಿತಿಯನ್ನು ರಾಜ್ಯದ ಜನತೆಗೆ ತಿಳಿಸುವುದೇ ಬೇರೆ, ಇಲ್ಲಿ ಪಾರ್ಲಿಮೆಂಟ್ ಮಿನಿಸ್ಟರ್ ಸಹಿತ ಇದ್ದಾರೆ ಅವರು ಏನು ಹೇಳುತ್ತಾರೋ ಹೇಳಲಿ. ಆಮೇಲೆ ಮುಖ್ಯಮಂತ್ರಿಗಳ ಜೊತೆ ಮಾತನಾಡೋಣ.

ಎಂ.ಸಿ.ನಾಣಯ್ಯ: ನಿನ್ನೆ ತಮಿಳುನಾಡಿನವರು ಸುಪ್ರೀಂ ಕೋರ್ಟಿನಲ್ಲಿ ಹಾಕಿರತಕ್ಕ ದಾವೆ. ಅದು ನಿನ್ನೆ ಪುನಃ ಕೂಡ ವಾದವಿವಾದಕ್ಕೆ ಬಂತು. ಈ ಸಂದರ್ಭದಲ್ಲಿ ರಾಷ್ಟ್ರೀಯ ಅಟಾರ್ನಿ ಜನರಲ್‌ರವರು ತಮ್ಮ ವಾದವನ್ನು ಮಂಡಿಸಿದ್ದಾರೆ. ಡ್ರಾಫ್ಟ್

ಸ್ಕೀಮ್‌ಗೆ ಸಂಬಂಧಿಸಿದ ಹಾಗೆ ತಮಿಳುನಾಡಿನವರು ತಮ್ಮ ಸಮ್ಮತಿಯನ್ನು ಸೂಚಿಸಿದ್ದಾರೆ. ಮತ್ತು ಕರ್ನಾಟಕ ಸರ್ಕಾರದವರು ಈ ಡ್ರಾಫ್ಟ್ ಸ್ಕೀಮ್‌ಗೆ ಸಂಬಂಧಿಸಿದ ಹಾಗೆ ತಮ್ಮ ಕೆಲವು ಅಬ್‌ಸರ್ವೇಶನ್ಸ್ ಮಾಡಿದ್ದಾರೆ. ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದಾರೆ. ಮತ್ತು ಅದು ಈಗ ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ. ಮತ್ತು ಕೇರಳ ಸರ್ಕಾರದವರು ಒಂದು ತಿಂಗಳು ಸಮಯ ಬೇಕು ಎಂದು ಕೇಳಿದ್ದಾರೆ. ಈ ಹಂತದಲ್ಲಿದೆ. ಆದುದರಿಂದ ಕೇಂದ್ರಸರ್ಕಾರದವರು ಇದನ್ನು ಪರಿಶೀಲನೆ ಮಾಡುತ್ತಿದ್ದಾರೆ ಅನ್ನತಕ್ಕಂಥದ್ದನ್ನು ಹೇಳುವಾಗ ನ್ಯಾಯಮೂರ್ತಿಗಳು ಈಗ ಕೋರ್ಟಿಗೆ ಹೇಳಿದರು, ಯಾವುದೇ ರಾಜ್ಯಸರ್ಕಾರ ಡ್ರಾಫ್ಟ್ ಸ್ಕೀಮ್‌ಗೆ ಸಂಬಂಧಪಟ್ಟ ಹಾಗೆ ಈಗ ಯಾರಾದರೂ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸದೆ ಹೋದರೆ, ಅದಕ್ಕೆ ಆಕ್ಷೇಪಣೆಗಳನ್ನು ಕ್ಲಾಸ್ ಬೈ ಕ್ಲಾಸ್ ಸಂಬಂಧಪಟ್ಟ ರಾಜ್ಯಸರ್ಕಾರಗಳು ಕೇಂದ್ರ ಸರ್ಕಾರಕ್ಕೆ ಒದಗಿಸಲಿಕ್ಕೆ ಎರಡು ವಾರಗಳ ಸಮಯವನ್ನು ಯಾವುದೇ ರಾಜ್ಯ ಸರ್ಕಾರಗಳಿಗೆ ಕೊಡುತ್ತಿದೆ. ಆ ಎರಡು ವಾರದ ಒಳಗಡೆ ಡ್ರಾಫ್ಟ್ ಸ್ಕೀಮ್‌ಗೆ ಸಂಬಂಧಪಟ್ಟ ಹಾಗೆ ಆಕ್ಷೇಪಣೆಗಳನ್ನು ಸಲ್ಲಿಸದೇ ಹೋದರೆ, ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರತಕ್ಕ ಯಾವುದೇ ಮಾಹಿತಿ ಇದ್ದರೆ ಅದನ್ನೇ ಅಂತಿಮ ಎಂದು ತೆಗೆದುಕೊಂಡು, ಕೇಂದ್ರ ಸರ್ಕಾರದವರು ಎರಡು ವಾರದೊಳಗೆ ಅದರ ಬಗ್ಗೆ ಒಂದು ಕ್ರಮ ಕೈಗೊಳ್ಳಬೇಕೆಂದು ನಿನ್ನೆಯ ದಿವಸ ತೀರ್ಮಾನ ಕೊಟ್ಟಿದೆ. ಇದು ಬಂದಾದ ಮೇಲೆ ನಮಗೆ ಐದೂವರೆ ಗಂಟೆಯ ಮೇಲೆ ಗೊತ್ತಾಯ್ತು. ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿದೆ, ನೀರಾವರಿ ಸಚಿವರು ಇದ್ದರು. ಬೆಳಿಗ್ಗೆ ಸಹ ಇದನ್ನೇ ಚರ್ಚೆ ಮಾಡಿ ಮಾಡಿ ಎರಡು ಸದನದ ಎಲ್ಲಾ ರಾಜಕೀಯ ಪಕ್ಷದ ಮುಖಂಡರನ್ನು ಕರೆದು ನಾಳೆ ಮೂರು ಗಂಟೆಗೆ ಸಭಾದ್ಯಕ್ಷರ ಸಭಾಂಗಣದಲ್ಲಿ ಯಾವ ಕ್ರಮ ಕೈಗೊಳ್ಳಬೇಕು, ಮುಂದೆ ರಾಜ್ಯ ಸರ್ಕಾರ ಯಾವ ನಿಲುವನ್ನು ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡುವುದಕ್ಕೋಸ್ಕರ ಒಂದು ಮೀಟಿಂಗನ್ನು ಕರೆದಿದ್ದೇವೆ. ಬೆಳಿಗ್ಗೆ ವಾಟಾಳ್ ನಾಗರಾಜ್‌ರವರು ಎತ್ತಿರತಕ್ಕ ಪ್ರಶ್ನೆಗೆ ಉತ್ತರ ನೀಡುತ್ತಾ ಸಹ ನೀರಾವರಿ ಸಚಿವರು ಈ ಮಾತನ್ನು ಹೇಳಿದ್ದಾರೆ.

ಗಮನ ಸೆಳೆಯುವ ಸೂಚನೆಗಳು

ವಿಷಯ: (1) ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಖಾಲಿ ಇರುವ ನಿರ್ದೇಶಕರ ಹುದ್ದೆಯನ್ನು ತುಂಬದೆ ಜನರಿಗೆ ತೊಂದರೆ.

ಶ್ರೀ ಸಿ.ಆರ್.ಸಗೀರ್ ಅಹಮದ್ (ಚಿಕ್ಕಮಗಳೂರು): ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಖಾಲಿ ಇರುವ ನಿರ್ದೇಶಕರ ಹುದ್ದೆಯನ್ನು ಈವರೆವಿಗೂ ತುಂಬದೆ ಇರುವುದರಿಂದ ಸಂಸ್ಥೆಯ ಮೇಲೆ ಉಂಟಾಗಿರುವ ದುಷ್ಪರಿಣಾಮದ ಬಗ್ಗೆ ವೈದ್ಯಕೀಯ ಶಿಕ್ಷಣ ರಾಜ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.